ಮಟ್ಟಿಗೆ ಹೇಳುವುದಾದರೆ, ಬ್ರೇನ್‌ಗೆ ಒಂದಿಷ್ಟು ರೆಸ್ಟ್ ಬೇಕಾಗಿದೆ. ನೀವಿಬ್ಬರೂ ಒಳ್ಳೆಯ ಕೆಲಸದಲ್ಲಿ ಇದ್ದೀರಿ. ಹಾಗಾಗಿ ನಿಮ್ಮ ಕುರಿತಾಗಿಯೂ ಅವರಿಗೆ ಚಿಂತೆ ಇದ್ದಂತಿಲ್ಲ, ಆದರೂ ಯಾವುದೋ ಕೊರಗು ಅವರನ್ನು ಕಾಡ್ತಾ ಇರಬೇಕು. ಹದಿನೈದು ದಿನಗಳ ಮೆಡಿಸಿನ್ ಬರೆದಿದ್ದೇನೆ. ಆವಾಗ ನೋಡಿ ಬೇಕಿದ್ದರೆ ಸೈಕೆಟ್ರಿಗೆ ರೆಫರ್ ಮಾಡ್ತೇನೆ....ಓಕೇ ಅಲ್ವಾ ಅಮ್ಮ?', ನಾನು ವಿಷಾದದ ನಗುಮುಖ ತೋರಿಸಿದೆ. ಅದನ್ನವರು ಗಮನಿಸಲಿಲ್ಲವೇನೋ. ಅವರಿಗೆ ಬೇಕಾಗಿದ್ದು ಬಾಯ್ದೆರೆ ಉತ್ತರ. 'ಮನೆಯಲ್ಲಿ ತೋಟದಲ್ಲಿ ತುಂಬಾ ಕೆಲಸ ಮಾಡ್ತಾರೇನೋ ಅಲ್ವಾ? ಮಾಡಬಾರದು ಅಂತ ನಾನು ಹೇಳೋದಿಲ್ಲ.' ಮಕ್ಕಳಿಬ್ಬರಿಂದ ಯಾವ ಉತ್ತರವೂ ಬರಲಿಲ್ಲ. ಹಾಗಾಗಿ ಮತ್ತೆ ಮಾತು ಮುಂದುವರಿಸಿದರು, 'ಎರಡು ದಿನ ಆಸ್ಪತ್ರೆಯಲ್ಲಿ ಫುಲ್ ರೆಸ್ಟ್ ಮಾಡಿದರಲ್ವಾ, ಗ್ಲುಕೋಸ್ ಎಲ್ಲ ಶರೀರದೊಳಗೆ ಹೋಗಿದೆ. ಹಾಗಾಗಿ ಈಗ ನಾರ್ಮಲ್‌ನಲ್ಲಿ ಇದ್ದ ಹಾಗೆ ಕಾಣಿಸ್ತಾರೆ. ಅವರಿಗೆ ಕಂಪ್ಲೀಟ್ ರೆಸ್ಟ್ ಬೇಕು... ನೋಡಿ ಅಮ್ಮಾ, ನೀವೀಗ ವಯಸ್ಸಿಗೆ ಬಂದ ಹುಡುಗಿಯಲ್ಲ, ನಿಮಗೀಗ ನಿರಂತರವಾಗಿ ಕೆಲಸ ಮಾಡ್ತಾ ಇರಬೇಕು ಎಂದು ಅನಿಸಿದರೂ, ನಿಮ್ಮ ದೇಹಕ್ಕೆ ಅದನ್ನು ತಡೆದುಕೊಳ್ಳುವ ಶಕ್ತಿಯಿಲ್ಲ. ಅದಕ್ಕಾಗಿ ನೀವು ನಿಮಗಾಗಿ ಸ್ವಲ್ಪ ಮಿತಿಯನ್ನು ಹಾಕಿಕೊಳ್ಳಬೇಕಾಗ್ತದೆ. ಕೆಲಸಗಳ ನಡುವೆ ಆಗಾಗ ಸ್ವಲ್ಪ ಅಂಗಾತ ಮಲಗಿ ಬಾಡಿ ರಿಲ್ಯಾಕ್ಸ್ ಮಾಡಿಕೊಳ್ಳಿ. ಆಗ ಎನರ್ಜಿ ಅಕ್ಯುಮಿಲೇಟ್ ಆಗ್ತದೆ.'

ಮಕ್ಕಳು ಈಗಲೂ ಆಕಾಶವೇ ತಲೆಯಮೇಲೆ ಬಿದ್ದವರಂತೆ ಮುಗುಂ ಆಗಿಯೇ ಇದ್ದವರಂತೆ ಕಂಡರು. ನಾನು ಸರಿಯಾಗಿದ್ದೇನೆ ಎಂದು ತೋರಿಸಿಕೊಳ್ಳಲು ಇದುವೇ ಸಕಾಲವೆಂದು ಡಾಕ್ಟರ್‌ರಿಗೆ ಹೇಳಿದೆ, 'ಡಾಕ್ಟರ್, ಬೇರೆ ಯಾವುದೇ ಸಮಸ್ಯೆ ಇದ್ದಿರ ಬಹುದು, ಬ್ರೇನ್ ಸಮಸ್ಯೆ ನೂರಕ್ಕೆ ನೂರರಷ್ಟು ಇರಲಿಕ್ಕಿಲ್ಲ.'

'ನೀವು ಅದ್ಹೇಗೆ ಹೇಳ್ತೀರಾ?' ಅವರ ಧ್ವನಿ ಹೇಗಿತ್ತೆಂದರೆ, ಡಾಕ್ಟರ್ ನಾನಾ ಅಥವಾ ನೀವಾ? ಎಂದು ಕೇಳುವಂತಿತ್ತು. ನನಗೆ ಮಾತು ಮುಂದುವರಿಸಲೇಬೇಕಿತ್ತು. ಅದಕ್ಕೆ ಹೇಳಿದೆ, 'ಹೈಸ್ಕೂಲ್‌ನಲ್ಲಿ ನಮ್ಮ ಇಂಗ್ಲಿಷ್ ಮೇಷ್ಟ್ರು ಹೇಳ್ತಾ ಇದ್ದರು, ಸುಶೀಲಾ, ನಿನಗೆ ದೇವರು ಎಲ್ಲವನ್ನು ಕೊಟ್ಟು, ನಿನ್ನ ತಲೆಯೊಳಗೆ ಬ್ರೇನ್ ಇಡೋದಕ್ಕೆ ಮರೆತಂತಿದೆ.' ಬ್ರೇನ್ ಇರುವ ಜಾಗದಲ್ಲಿ ಏನಿದೆ ಎಂಬ ಬಗ್ಗೆ ಮೇಷ್ಟ್ರು ಹೇಳುತ್ತಿದ್ದ ಇನ್ನೂ ಒಂದು ವಾಕ್ಯಾಂಶ ಅಲ್ಲಿ ಸೇರಿಸಬಹುದಿತ್ತು. ಅಷ್ಟರಲ್ಲಿ ಡಾಕ್ಟರ್ ಪಿಸ್ಕ್... ಪಿಸ್ಕ್ ಎಂದು ನಗಲಾರಂಭಿಸಿದರು. ಅವರ ನಗು ತಾರಕ್ಕೇರುತ್ತಿದ್ದಂತೆ, ತಮ್ಮ ಎರಡೂ ಕೈಗಳನ್ನು ಮೇಲಕ್ಕೆತ್ತಿ ಟೇಬಲ್ ಮೇಲೆ ಬಾರಿಸಿದರು. ಬಾಗಿಲ ಬಳಿ ನಿಂತ ನರ್ಸ್ ಗಾಬರಿಯಿಂದ ಒಳಗೋಡಿ ಬಂದು ನೋಡಿದರೆ, ಒಬ್ಬರು ನಗುತ್ತಿದ್ದಾರೆ, ಇಬ್ಬರು ಬಾಯಿಗೆ ಗಟ್ಟಿಯಾಗಿ ಕೈ ಒತ್ತಿಕೊಂಡಿದ್ದಾರೆ, ಪೇಶಂಟ್ ಮಾತ್ರ ತನಗೇನೇನೂ ಗೊತ್ತಿಲ್ಲಪ್ಪ ಎನ್ನುವಂತೆ ಮುಖ ಹುಳ್ಳಗೆ ಮಾಡಿಕೊಂಡು ಕುಳಿತಿದ್ದಾಳೆ.

'ಡಾಕ್ಟರ್?' ನರ್ಸ್ ಪ್ರಶ್ನಾರ್ಥಕವಾಗಿ ಕರೆದುದಕ್ಕೆ ನಗುತ್ತಲೇ ಹೇಳಿದರು, 'ನಥಿಂಗ್... ನಥಿಂಗ್' ಎನ್ನುತ್ತಾ ಪೆನ್ನು ಹಿಡಿದು ನೋಟ್‌ಪ್ಯಾಡ್ ಎತ್ತಿಕೊಂಡರು.

ರೆಪ್ಪೆ ಮುಚ್ಚಿ ತೆರೆಯುವಷ್ಟರಲ್ಲಿ ಪುಟದ ತುಂಬ ಬರೆದು ಸಹಿ ಹಾಕಿ ಮುಗಿಸಿ, ನನ್ನ ಮುಂದಿಟ್ಟು ಹೇಳಿದರು, 'ಅಮ್ಮಾ, ನಿಮಗೇನೂ ಆಗಿಲ್ಲ. ಯೂ ಆರ್ ಪರಫೆಕ್ಟಲೀ ಆಲ್‌ರೈಟ್... ಇವರಿಬ್ಬರು ಟ್ವಿನ್ಸಾ?'

'ಅಲ್ಲ, ಎರಡೂವರೆ ವರ್ಷ ಅಂತರದವರು.'

'ಮಕ್ಕಳ ಮದುವೆ ಮಾಡಿ, ಎಲ್ಲ ಸರಿ ಹೋಗ್ತದೆ... ಹದಿನೈದು ದಿನಕ್ಕೆ ಮಾತ್ರ ಬರೆದಿದ್ದೇನೆ. ಇಲ್ಲೇ ಹೊರಗೆ ಹೋದ ಕೂಡಲೆ ಬಲಗಡೆ ಮೆಡಿಕಲ್ ಸ್ಟೋರ್ಸ್ ಇದೆ. ಅಲ್ಲೇ ತೆಗೆದುಕೊಳ್ಳಿ. ಇಲ್ಲಿ ಮಾಡಿರುವ ಸ್ಕ್ಯಾನಿಂಗ್, ಎಕ್ಸರೇ ಯಾವುದಾದರೂ ರಿಪೋರ್ಟ್ ಬೇಕಿದ್ದರೆ, ಕೌಂಟರ್ ನಂಬರ್ ಮೂರಕ್ಕೆ ಹೋಗಿ, ಅಲ್ಲಿ ಪೇಮೆಂಟ್ ಮಾಡಿ ತೆಗೆದುಕೊಳ್ಳಿ.'



ಹೊರಗಡೆ ಬಂದೆವು. ನನ್ನ ಕೈಯಲ್ಲಿದ್ದ ಚೀಟಿಯನ್ನು ಸಣ್ಣವ ಎಳೆದುಕೊಂಡು, 'ಅಮ್ಮ,